## ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಃ ನ್ಯಾಯಾಲಯಃ ನರಸಿಂಹರಾಜಪುರ

**ಸಿಸಿಃನಂಃ 43/2025**

**ಸಾಕ್ಷಿದಾರರ ಹೆಸರು ಃ ಲೋಹಿತ್ ಸಿ.ಡಬ್ಲ್ಯೂಃ 3**
**ತಂದೆಯ ಹೆಸರು ಃ ರಮೇಶ್ ಗೌಡ ಪಿ.ಡಬ್ಲೂಃ 3**
**ವಯಸ್ಸು ಃ 31**
**ಉದ್ಯೋಗ ಃ ವ್ಯವಸಾಯ**
**ವಾಸಸ್ಥಳ ಃ ನೇಮನಹಳ್ಳಿ, ಬಾಳೆಹೊನ್ನೂರು**

**ದಿನಾಂಕಃ 07.07.2025 ರಂದು ಪ್ರಮಾಣವಚನ ಬೋಧಿಸಲಾಯಿತು.**

**ಃಃ ಮುಖ್ಯ ವಿಚಾರಣೆಃ ಮಾನ್ಯಃ ಎಪಿಪಿಯವರಿಂದಃ**

ದಿನಾಂಕಃ 06.12.2024 ರಂದು ನಾನು ಬೆಳಗ್ಗೆ ಸುಮಾರು 10 ಗಂಟೆ ವೇಳೆಗೆ ಬಾಳೆಹೊನ್ನೂರಿಗೆ ಬಂದಿದ್ದೆ. ಅದೇ ದಿನ ಸುಮಾರು 11 ಗಂಟೆಗೆ ನನ್ನನ್ನು ಕುರಿತು ಹೋಟೆಲ್ ಸೌಂದರ್ಯ ಬಳಿ ಗಲಾಟೆ ಆಗಿದೆ ಇದರ ಬಗ್ಗೆ ಮಹಜರ್ ಮಾಡುವುದಿದೆ ಅದಕ್ಕಾಗಿ ಸಾಕ್ಷಿದಾರನಾಗಿ ಸಹಕರಿಸುವಂತೆ ಬಾಳೆಹೊನ್ನೂರು ಪೊಲೀಸರು ನೋಟೀಸು ನೀಡಿದರು. ಆ ಸಂದರ್ಭದಲ್ಲಿ ಅಲ್ಲಿ ನಾನು, ಚಾಸಾ-2 ಮತ್ತು ಇನ್ನೊಬ್ಬರು ಅಲ್ಲಿ ಪೊಲೀಸರೊಡನೆ ಹಾಜರಿದ್ದರು. ಹೋಟೆಲ್ ಸೌಂದರ್ಯ ಎದುರುಗಡೆ ಕೃತ್ಯ ನಡೆದ ಸ್ಥಳ ಎಂದು ಪೊಲೀಸರು ನನಗೆ ತೋರಿಸಿದರು. ಅದೇ ಸಂದರ್ಭದಲ್ಲಿ ಸದರಿ ಕೃತ್ಯ ನಡೆದ ಸ್ಥಳದ ಪಂಚನಾಮೆಯನ್ನು ಬೆಳಗ್ಗೆ 11.30 ರಿಂದ 12.30 ರವರೆಗೆ ಸ್ಥಳದಲ್ಲಿಯೇ ದಾಖಲು ಮಾಡಿಕೊಂಡರು. ಸದರಿ ಸ್ಥಳದಲ್ಲಿ ಬಿದ್ದಿದ್ದ ಒಂದು ಬಿಯರ್ ಬಾಟಲಿಯನ್ನು ಯಾರೋ ಒಬ್ಬರು ಪೊಲೀಸರಿಗೆ ನಮ್ಮ ಸಮಕ್ಷಮ ತೋರಿಸಿ ಕೃತ್ಯಕ್ಕೆ ಬಳಸಿದ ಬಿಯರ್ ಬಾಟಲಿ ಇದೇ ಆಗಿರುತ್ತದೆ ಎಂದು ತಿಳಿಸಿದರು. ಸದರಿ ಬಿಯರ್ ಬಾಟಲಿಯನ್ನು ನಮ್ಮ ಸಮಕ್ಷಮ ಪೊಲೀಸರು ಜಪ್ತು ಮಾಡಿಕೊಂಡರು. ಸದರಿ ಸಮಯದಲ್ಲಿ ಪೊಲೀಸರು ಪೋಟೋ ತೆಗೆದುಕೊಂಡರು.

ಸಾಕ್ಷಿಯು ಸ್ಥಳ ಮತ್ತು ಜಪ್ತು ಮಹಜರುಗಳನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-2, ಅದರಲ್ಲಿರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ನಿಪಿ-2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಒಂದು ಪೋಟೋವನ್ನು ನೋಡಿ ಗುರುತಿಸಿದ್ದು ಅದು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿರುತ್ತದೆ. ಈ ದಿನ ನ್ಯಾಯಾಲಯದ

ಮುಂದಿರುವ ಒಂದು ಒಡೆದ ಬಿಯರ್ ಬಾಟಲಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ತನ್ನ ಸಮಕ್ಷಮ ಅಮಾನತುಪಡಿಸಿಕೊಂಡಿರುವುದಾಗಿ ನುಡಿಯುತ್ತಾರೆ. ಸದರಿ ಬಿಯರ್ ಬಾಟಲಿ ಈಗಾಗಲೇ ಎಂಓ-1 ಎಂದು ಗುರುತಿಸಲಾಗಿರುತ್ತದೆ.

(ಈ ಹಂತದಲ್ಲಿ ಮಾನ್ಯ ಎಪಿಪಿ ಯವರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ ಅಂತೆಯೇ ಪರಿಗಣಿಸಿ ಅನುಮತಿ ನೀಡಲಾಯಿತು)

**ಃಃಪಾಟೀ ಸವಾಲುಃ ಮಾನ್ಯ ಎಪಿಪಿಯವರಿಂದಃಃ**

ದಿನಾಂಕಃ 06.12.2024 ರಂದು ಮಹಜರ್ ಮಾಡುವ ಕಾಲಕ್ಕೆ ಚಾಸಾ-4/ಅವಿನಾಶ್ ರವರು ಹಾಜರಿದ್ದರು ಎಂದರೆ ಸಾಕ್ಷಿಯು ನನಗೆ ಅವರ ಹೆಸರು ಗೊತ್ತಿಲ್ಲ ಎಂದು ನುಡಿಯುತ್ತಾರೆ.

**ಃಪಾಟೀ ಸವಾಲು ಆರೋಪಿ ಪರ ಶ್ರೀ. ಕೆ ಎಸ್ ಎಸ್ ವಕೀಲರಿಂದಃಃ**

ನ್ಯಾಯಾಲಯದ ಸಮಯವಾದ್ದರಿಂದ ಪಾಟಿ ಸವಾಲಿಗೆ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇ ಎ ಒ**

**ಪ್ರ.ದ.ನ್ಯಾದಂಃ ನ.ರಾ.ಪುರ.**

**ಸಾಕ್ಷಿ ಸಹಿಃ**